ಶ್ರೀ ಕೆ. ವಸಂತ ಬಂಗೇರ.—ಈ ಯೋಜನೆ ಮಂಜೂರಾಗಿ ಎಷ್ಟು ಸಮಯ ಆಯಿತು. ಈ ಕಾಮಗಾರಿ ಪ್ರಾರಂಭಿಸಲಿಕ್ಕೆ ಇಷ್ಟು ತಡ ಏತಕ್ಕೆ ಆಯಿತು ? ಇದರ ಒಟ್ಟು ಅಂದಾಜು ಮೊತ್ತ ಎಷ್ಟು ? ಈ ಕೆಲಸ ಪ್ರಾರಂಭವಾಗಿದ್ದು ಪ್ರಗತಿಯಲ್ಲಿದೆ ಎಂದು ತಿಳಿಸಿದ್ದೀರಿ. ಅಲ್ಲಿ ಯಾವ ಕೆಲಸವೂ ಪ್ರಾರಂಭವಾಗಿಲ್ಲ. ಈ ಅಲ್ಲಿ ಏನೇನು ಕೆಲಸ ನಡೆದಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಂಜೂರಾತಿ ದೊರೆತ ಸರ್ಕಾರಿ ಆಜ್ಞೆ ಸಂಖ್ಯೆ ೧೭–೧–೧೯೮೬ರ ಪ್ರಕಾರ ಬೆಳ್ತಂಗಡಿಯಲ್ಲಿ ಕೆಲಸ ನಡೆಯುತ್ತಿದೆ. ಇವನ್ನು ತೀವ್ರಗತಿಯಲ್ಲಿ ಮಾಡಿಸಬೇಕೆಂದು ತಾವು ಹೇಳಿ, ಮಾಡಿಸೋಣ.

ಶ್ರೀ ಕೆ. ವಸಂತ ಬಂಗೇರ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಅಲ್ಲಿ ಕೆಲಸ ನಡೆದಿದೆ ಎಂದು ಹೇಳಿದರು. ಅಲ್ಲಿ ಕೆಲಸ ನಡೆಯುತ್ತಿಲ್ಲ, ತೀವ್ರಗತಿಯಲ್ಲಿ ಮಾಡಿಸಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಮಾನ್ಯ ಸದಸ್ಯರು ಕೆಲಸ ನಡೆಯುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಅವರ ಹೇಳಿಕೆ ಪ್ರಕಾರ ತೆಗೆದುಕೊಂಡರೆ ನಾನು ಕೊಟ್ಟಿರತಕ್ಕ ಉತ್ತರ ತಪ್ಪಾಗುತ್ತದೆ. ಆದ್ದರಿಂದ ಆದರ ಬಗ್ಗೆ ನಾನು ವಿವರ ತರಿಸುತ್ತೇನೆ, ಸುಳ್ಳು ವರದಿ ಏನಾದರೂ ಕೊಟ್ಟಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ವಸಂತಬಂಗೇರ.—ಕಾಮಗಾರಿ ಮಂಜೂರಾಗಿ ಎಷ್ಟು ಸಮಯ ಆಯಿತು ? ಮಂಜೂರಾದ ಹಣ ಎಷ್ಟು ? ಎಷ್ಟು ಹಣ ಖರ್ಚಾಗಿದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಮಂಜೂರಾದ ಹಣ ೮ ಲಕ್ಷ ರೂಪಾಯಿಗಳು. ಅದರಲ್ಲಿ ಜೂನ್ ಅಂತ್ಯದವರೆಗೆ ೬೪ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಕೆಲಸವನ್ನು ತ್ವರಿತಗತಿಯಲ್ಲಿ ಮಾಡಿಸುತ್ತೇವೆ.

ಶ್ರೀ ಕೆ. ವಸಂತ ಬಂಗೇರ.—ಬೆಳ್ತಂಗಡಿಯಲ್ಲಿ ಮಲವಿಸರ್ಜಿತ ಮತ್ತು ಕೊಳಕು ನೀರನ್ನು ಕೊಡುತ್ತಿದ್ದಾರೆ. ಎಷ್ಟು ದಿವಸಗಳ ಕಾಲ ಈ ನೀರನ್ನು ಜನರು ಕುಡಿಯಬೇಕು. ಎಷ್ಟು ದಿವಸದಲ್ಲಿ ಇದನ್ನು ಸುಧಾರಣೆ ಮಾಡಿ ಒಳ್ಳೆಯ ನೀರನ್ನು ಕೊಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಕೊಡತಕ್ಕ ನೀರನ್ನು ಕ್ಲೋರೋನೈಟ್ ಮಾಡಿ ಕೊಡುತ್ತಿದ್ದೇವೆ. ತೊಂದರೆ ಇದ್ದರೆ ಹೇಳಿ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ, ಈ ತಕ್ಷಣ ಆದೇಶ ಕೊಡುತ್ತೇನೆ.

ಶ್ರೀ ಕೆ. ವಸಂತ ಬಂಗೇರ.—ಬೆಳ್ತಂಗಡಿಯನ್ನು ಮಂಡಲ್ ಪಂಚಾಯತ್ ಎಂದು ಘೋಷಣೆ ಮಾಡಿದ್ದೀರಿ. ನನಗೆ ಉತ್ತರ ಕೊಡುತ್ತಿರುವವರು ಲಕ್ಷ್ಮೀಸಾಗರ್‌ರವರು. ಅದು ಅವರ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಂಡಲ್ ಪಂಚಾಯತ್ ಮಾನ್ಯ ನಜೀರ್ ಸಾಬ್ ಅವರಿಗೆ ಬರಬಹುದು. ಆದರೆ ನೀರು ಸರಬರಾಜು ಮಾಡತಕ್ಕ ಕೆಲಸವನ್ನು ನಗರ ನೀರು ಸರಬರಾಜು ಮಂಡಲಿಯವರು ಮಾಡುತ್ತಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಶಹಾಬಾದಿನಲ್ಲಿ ನೀರು ಸರಬರಾಜಿನ ಬಗ್ಗೆ

೫೨ (೨೦೭) ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—